

# ಹರಿಹರನ 'ಪುಷ್ಪರಗಳೆ'ಯಲ್ಲಿ ಚಿತ್ರಿತವಾಗಿರುವ ಆದರ್ಶ ಭಕ್ತ

**ಟಿ. ವಿಜಯ್ ಕುಮಾರ್**

ಭಕ್ತಕವಿ ಹಂಪೆಯ ಹರಿಹರನು ಬಸವೇಶ್ವರ, ಅಲ್ಲಮ ಮುಂತಾದ ಹಲವು ಮಂದಿ ಶಿವಭಕ್ತರ ಜೀವನಚರಿತ್ರೆಯನ್ನು ರಚಿಸಿದ್ದು, ಈ ಕೃತಿಗಳ ಮೂಲಕ ತನ್ನ ಶಿವಭಕ್ತಿಯನ್ನು ಮೆರೆದಿದ್ದಾನೆ. ತನ್ನದೇ ಜೀವನದ ಚಿತ್ರದಂತಿರುವ 'ಪುಷ್ಪರಗಳೆ'ಯು ಭಕ್ತನೊಬ್ಬನ ಅಸಾಧಾರಣ, ಭಾವಪೂರ್ಣ ಆಧ್ಯಾತ್ಮಿಕತೆಯನ್ನು ಪ್ರಕಟಪಡಿಸುತ್ತದೆ. ಈ ಕುರಿತು ಬರೆದಿರುವ ಲೇಖಕರು ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದು, ಪ್ರಸ್ತುತ ಸಂಶೋಧನ ವ್ಯಾಸಂಗ ನಡೆಸುತ್ತಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ 'ರಗಳೆಯ ಕವಿ' ಎಂದೇ ಪ್ರಸಿದ್ಧನಾದ ಕವಿ ಹರಿಹರ. ಈತನ ಕಾಲ ೧೨ನೇ ಶತಮಾನ. ಶಿವಭಕ್ತರನ್ನು ಮಾತ್ರವೇ ತನ್ನ ಬರಹದ ನಾಯಕರನ್ನಾಗಿಸಿಕೊಂಡಿರುವುದು ಹರಿಹರನ ರಗಳೆಗಳ ವಿಶೇಷತೆಯಾಗಿದೆ. ಹರಿಹರನು ತಾನು ಸ್ವತಃ ಶಿವಭಕ್ತನಾಗಿದ್ದು, ತಾನು ಬರೆದಿರುವ ಈ 'ಪುಷ್ಪರಗಳೆ' ಯಲ್ಲಿ ತನ್ನನ್ನೇ ಚಿತ್ರಿಸಿಕೊಂಡಿರುವಂತೆ ಕಾಣುತ್ತದೆ. ಈತನನ್ನು 'ಭಕ್ತ ಕವಿ' ಎಂದು ಅನೇಕ ವಿದ್ವಾಂಸರು ಗುರುತಿಸಿರುವುದಕ್ಕೆ ಇದು ನಿದರ್ಶನದಂತಿದೆ. ಯಾವುದೇ ಆಡಂಬರವಿಲ್ಲದೇ; ಅಲಂಕಾರಗಳಿಲ್ಲದೆ ಸಹಜತೆಯನ್ನೇ ಅಲಂಕಾರವಾಗಿಸಿ, ಭಕ್ತಿಯನ್ನೇ ಆಡಂಬರವಾಗಿಸಿಕೊಂಡಿರುವ ಭಕ್ತನನ್ನು ಇಲ್ಲಿ ಕಾಣಬಹುದಾಗಿದೆ.

ಹರಿಹರನ 'ಪುಷ್ಪರಗಳೆ'ಯೇ ಹಂಪೆಯ ವಿರೂಪಾಕ್ಷನಿಗೆ ಭಕ್ತ ಹರಿಹರನು ನೀಡಿರುವ ಪೂಜೆಯ ಪುಷ್ಪವಾಗಿದೆ. ಅಲ್ಲದೆ ಇಲ್ಲಿರುವ ಭಕ್ತನು ತನ್ನನ್ನೂ ಸಹ (ಪೂಜೆಯ ಪುಷ್ಪವಾಗಿಸಿಕೊಂಡು) ದೇವನಿಗೆ ಅರ್ಪಿಸಿಕೊಂಡಿದ್ದಾನೆ. ಇಲ್ಲಿ ಹರಿಹರನು ''ತಾನು ಭಕ್ತನಾಗಿ ದೇವ ವಿರೂಪಾಕ್ಷನಿಗೆ ಪೂಜೆ ಸಲ್ಲಿಸುತ್ತಿದ್ದೇನೆ'' ಎಂಬ ಭಾವವನ್ನು ತಾಳದೆ, ವಿರೂಪಾಕ್ಷನೇ ದಯೆಗೈದು ತನ್ನ ಮೂಲಕ (ಹರಿಹರನ ಮೂಲಕ) ಅವನ ಪೂಜೆಯನ್ನು ಮಾಡಿಸಿಕೊಳ್ಳುತ್ತಿದ್ದಾನೆ. ಆ ಪೂಜೆಗೆ ಬೇಕಾದ ಭಕ್ತಿ-ಭಾವವನ್ನೂ, ಹೂಗಳನ್ನೂ ದೇವನೇ ಕರುಣಿಸಿರುವುದಲ್ಲದೇ ಅಂತಹ ಪುಣ್ಯ ಕಾರ್ಯವನ್ನು ನೆರವೇರಿಸಲು ತನಗೆ ಅವಕಾಶ ನೀಡಿರುವನೆಂಬ ಭಾವ ಹರಿಹರನ ಹರುಷಕ್ಕೆ, ಭಕ್ತಿಯ ಪರಾಕಾಷ್ಠೆಗೆ ಕಾರಣವಾಗಿದೆ.

ಇಲ್ಲಿರುವ ಭಕ್ತನು ತನ್ನ ತನು-ಮನ-ಕಾಯಕ-ವಚನ-ನೋಟ-ಭಾವ ಎಲ್ಲವನ್ನೂ ದೇವನಿಗರ್ಪಿಸಿ, ಸಂಪೂರ್ಣ ಸಮರ್ಪಣಾಭಾವದಿಂದ ಪೂಜೆಯನ್ನು ಕೈಗೊಳ್ಳುತ್ತಾನೆ. ಇಲ್ಲಿ ಆತನ ನಡೆ, ಅದರಿಂದುಂಟಾಗುವ ಪ್ರತಿಫಲ ಎಲ್ಲವೂ ದೇವನಿಗೆ ಅರ್ಪಿತವಾಗಿ, ತನ್ಮೂಲಕ ದೇವನು ತನ್ನ ಸೇವೆ ಮಾಡಿಸಿಕೊಳ್ಳುತ್ತಿದ್ದಾನೆ. ಇಲ್ಲಿ ಭಕ್ತನು ದೇವನಲ್ಲಿ ಐಕ್ಯಗೊಂಡು, ಅದ್ವೈತದ ಭಾವ ಸುಳಿಯುತ್ತದೆ. ಇದಕ್ಕೆ ಪೂರಕವೆನಿಸುವ ಅಂಶಗಳನ್ನು

''ನೆನಹು ನಿನ್ನೊಳು ಪೊಗಲು ಚಿತ್ತವೆರಡಿಲ್ಲೆನಿಸಿ''
''ನಿನ್ನ ನಿಜವೆನ್ನ ಜೀವವನಿಂಬುಗೊಂಡಿರಲು''
ನಿನ್ನಂಗವೆನ್ನ ಸರ್ವಾಂಗಮಂ ತೀವಿರಲು''

— ಎಂಬ ಸಾಲುಗಳಲ್ಲಿ ಗುರುತಿಸಬಹುದಾಗಿದೆ.

'ಪುಷ್ಪರಗಳೆ'ಯಲ್ಲಿ ವಿರೂಪಾಕ್ಷನ ಲಿಂಗಕ್ಕೆ (ಹರಿಹರನು) ಭಕ್ತನು ಜೀವತುಂಬಿದ್ದಾನೆ. ಇಲ್ಲಿ ಹರಿಹರನನ್ನು ಕವಿಯಾಗಿ ನೋಡುವುದರ ಬದಲು ಭಕ್ತನನ್ನಾಗಿ ನೋಡುವುದರಿಂದ ಆತನು ಒಬ್ಬ ಆದರ್ಶ ಭಕ್ತನ ನೆಲೆಗೆ ನಮ್ಮನ್ನು ಕರೆದೊಯ್ಯುವುದರಲ್ಲಿ ಸಂಶಯವೇ ಇಲ್ಲ. ಇಲ್ಲಿರುವ ಭಕ್ತನ ದಿನಚರಿಯು ದೇವರ ಪೂಜೆಗೆಂದು ಸೂರ್ಯೋದಯಕ್ಕೂ ಮುಂಚೆ ಎದ್ದು, ಅಣಿಗೊಂಡು ಹೂಗಳನ್ನು ತರಲು ಹೋಗುವ ದೃಶ್ಯದಿಂದ ಪ್ರಾರಂಭಗೊಳ್ಳುತ್ತದೆ. ಹಾಗೆ ಹೊರಟವನು ತನ್ನ ದೇವನನ್ನು ಹೊಚ್ಚಹೊಸ ಹೂಗಳಿಂದ, ಪರಿಶುದ್ಧವಾದ ಹೂಗಳಿಂದ- ಪತ್ರೆಗಳಿಂದ ಪೂಜಿಸಲು ಕಾತರದಿಂದ ಹೂಬನದ ಬಳಿ ಬರುತ್ತಾನೆ. ಹೂಬನ ಹತ್ತಿರವಾಗುತ್ತಲೇ ಆತನ ಆನಂದ ಹೆಚ್ಚುತ್ತದೆ. ಎಷ್ಟು ಬೇಗ ಹೂಗಳನ್ನು ಆರಿಸಿ-ಅಣಿಗೊಳಿಸಿ ದೇವನಿಗರ್ಪಿಸುವೆನೋ ಎಂಬ ಕಾತರದಲ್ಲಿದ್ದಾನೆ ಭಕ್ತ.

ದುಂಬಿಯು ಮುಟ್ಟದ, ಗಾಳಿಯು ಸೋಕದ, ಅಷ್ಟೇ ಅಲ್ಲ ಸೂರ್ಯನ ಕಿರಣಗಳಿಗೂ ಸಹ ಸ್ಪರ್ಶಿಸದೆ ಪರಿಶುದ್ಧವೆನಿಸಿದ ಹೂಗಳನ್ನು ಆರಿಸಿ ಅವುಗಳಿಂದ ದೇವನನ್ನು ಅರ್ಚಿಸಬೇಕೆಂಬುದು ಅವನ ಬಯಕೆಯಾಗಿದೆ. ಇಂತಹ ಅವನ ಆಸೆಯನ್ನು ಈಡೇರಿಸಲು ವಿರೂಪಾಕ್ಷನೇ ಸಹಕರಿಸುತ್ತಾನೆ ಎಂಬುದು ಅವನ ನಂಬಿಕೆ. ಇಂತಹ ಆಸೆಗಳನ್ನು ಹೊತ್ತು ಹೂಬಿಡಿಸಲು ಬರುವ ಭಕ್ತನು ಹೂಬನದಲ್ಲಿರುವ ಹೂಗಳನ್ನು ಏಕಾಏಕಿ ಮನಬಂದಂತೆ ಕೊಯ್ದು ಬುಟ್ಟಿಗೆ ಹಾಕಿಕೊಳ್ಳುವುದಿಲ್ಲ. ಬದಲಾಗಿ ಆಯಾ ಹೂಗಿಡಗಳಲ್ಲಿಗೇ ಹೋಗಿ, ಅವುಗಳನ್ನು ಶಿವಪೂಜೆಗಾಗಿ ಹೂಗಳನ್ನು ನೀಡಬೇಕೆಂದು ವಿನಯದಿಂದ ಪ್ರಾರ್ಥನೆ ಮಾಡುತ್ತಾನೆ. ಬಹುಶಃ ತಾನು ಪೂಜೆಗೆಂದು ಒಯ್ಯುವ ಹೂಗಳಿಗೂ ಸಹ ''ತಾನು ಶಿವನ ಪೂಜೆಗೆ ಹೋಗಲಿದ್ದೇನೆ'' ಎಂಬ ಧನ್ಯತಾ ಭಾವ ಮೂಡಲಿ ಎಂಬುದು ಅವನ ಆಶಯವಿರಬೇಕು.

ಹೂದೋಟದ ಪ್ರತಿಯೊಂದು ಹೂವನ್ನು ಕಂಡಾಗಲೂ ಈ ಭಕ್ತನಿಗೆ ಅದರ ತೂಗಾಟದಲ್ಲಿ, ಸೌಂದರ್ಯದಲ್ಲಿ ತನ್ನ ಇಷ್ಟ

ದೈವವೇ ಕಾಣುತ್ತಿರಬೇಕು, ಅಥವಾ ''ನನ್ನ ದೇವರ ಪೂಜೆಗೆ ಇಂತಹ ಸುಂದರ-ಸುಗಂಧಭರಿತ ಹೂ ಸಿಕ್ಕಿತಲ್ಲಾ!' ಎಂಬ ಹರುಷ ಆ ಭಕ್ತನಿಗೆ. ಹಾಗೆ ಮೂಡಿದ ಭಾವವನ್ನು

''ತೂಗಾಡುತೊಲೆದಾಡುತಾಹಾ ವಿರೂಪಾಕ್ಷಾ
ಪೂಗಳಂ ನಡೆನೋಡುತಾಹಾ ವಿರೂಪಾಕ್ಷಾ''

ಎಂಬ ಸಾಲುಗಳಲ್ಲಿ ಕಾಣಬಹುದಾಗಿದೆ. ಆತನಿಗೆ ಯಾಂತ್ರಿಕವಾಗಿಯಾದರೂ ಅಲ್ಲಿ ತಾನು ''ದೇವರ ಪೂಜೆಗಾಗಿ ಹೂ ಬಿಡಿಸಲು ಬಂದವನು' ಎಂಬ ಭಾವವಿಲ್ಲ. ಬದಲಾಗಿ,

''...ಹಿಗ್ಗುತ್ತೆ ಹೊಂಗುತ್ತೆ ಹೊಮ್ಮುತ್ತಗಿದು
ಎನಗಿಂತು ಕರುಣಿಸಿದನೇ ಸದಾಶಿವ...''

ಎಂದು, 'ದೇವನ ಪೂಜೆಗೆ ದೇವನೇ ತನ್ನನ್ನು ಕಳುಹಿಸಿದ್ದಾನೆ, ಅವನ ಪೂಜೆಗಾಗಿ ತಾನು ಆರಿಸುತ್ತಿರುವ ಹೂಗಳನ್ನು ಸಹ ಅವನೇ ತನಗೆ ಸಿಗುವಂತೆ ಮಾಡಿದ್ದಾನೆ' ಎಂಬುದಾಗಿ ಭಾವಿಸುತ್ತಾನೆ. ಎಂದರೆ ಇಲ್ಲಿ ಭಕ್ತನು ತಾನು ದೇವರ ಕರಣಿಕ, ಎಲ್ಲವೂ ದೇವನ ಇಚ್ಛೆಯಂತೆ ಸಾಗುತ್ತಿದೆ, ದೇವನನ್ನು ಪೂಜಿಸುವ, ಭಕ್ತಿಯಿಂದ ಆರಾಧಿಸುವ ಪುಣ್ಯದ ಕೆಲಸಕ್ಕೆ ತಾನು ದೇವನಿಂದಲೇ ನೇಮಿಸಲ್ಪಟ್ಟಿದ್ದೇನೆ ಎಂಬ ಸಮರ್ಪಣಾಭಾವಕ್ಕೆ ಒಳಗಾಗಿರುವುದನ್ನು ಕಾಣಬಹುದಾಗಿದೆ. ಈ ಸಾಲುಗಳನ್ನು ಓದುವಾಗ, ಪ್ರಸ್ತುತದಲ್ಲಿ ಮಾನವನ ಜೀವನವು ದೇವನಿಗಾಗಿ ಎಷ್ಟು ಪ್ರಮಾಣದಲ್ಲಿ ಅರ್ಪಿತವಾಗಿದೆ? ಆತನ ನಡೆ-ನುಡಿ-ಕರ್ಮಗಳು ಎಲ್ಲವೂ ಈಗ ಯಾವ ಅಪೇಕ್ಷೆಯಿಂದ ಸಾಗುತ್ತಿದೆ ಎಂದು ಚಿಂತನೆ ಮಾಡಿದಾಗ ಅಂದಿನ ಆದರ್ಶ ಭಕ್ತನಿಗೂ ಇಂದಿನ ಆಧುನಿಕ ಭಕ್ತನಿಗೂ ಇರುವ ವ್ಯತ್ಯಾಸ ತಿಳಿಯುತ್ತದೆ.

ಹರಿಹರನು ಚಿತ್ರಿಸಿರುವ ಈ ಆದರ್ಶ ಭಕ್ತನ ಭಕ್ತಿ, ಭಕ್ತಿ ತುಂಬಿದ ಹೃದಯ ಎಂತಹುದು ಎಂದು ಮತ್ತಷ್ಟು ತಿಳಿಯಬೇಕಾದರೆ, ಆತನ ಮುಗ್ಧ ಭಕ್ತಿ, ಮುಗ್ಧ ದೈವಪ್ರೀತಿ ಹೇಗೆ ಎಲ್ಲೆಲ್ಲಿಯೂ ಪ್ರೀತಿಯನ್ನು ಕಾಣುವುದು, ಪ್ರೀತಿಯನ್ನು ಹಂಚುವುದು, ಅವನು ಭಕ್ತಿಯಿಂದ ಹೇಗೆ ಉಪಾಸನೆ ಮಾಡುವನು ಎಂದು ತಿಳಿಯಬೇಕು. ಇಲ್ಲಿ ಭಕ್ತನು ಪೂಜೆಗಾಗಿ ಹೂಗಳನ್ನು ಕೀಳುವ ಬದಲು ಹೂಗಳನ್ನು ಬೇಡುವ ಸನ್ನಿವೇಶವನ್ನು ಗಮನಿಸಬೇಕಾಗುತ್ತದೆ.

ಅಳಿಯೆರಗದನಿಲನಲುಗದ ರವಿಕರಂ ಪುಗದ
ಬೆಳೆದು ನಳನಳಿಸಿ ಮಗಮಗಿಸುತೆ ಕವಲಿರಿದ
ಇರವಂತಿ ಇರೆ ಕಂಡು ನೋಡಲಮ್ಮದೆ ನಿಂದು
''ಪರಮಂಗೆ ನೀನೀಗ ಪೂವನೀಯೌ ಎಂದು'',
...ಸಂಪಗೆಯ ಮರನಿರ್ದೆಡೆಗೆ ನಡೆ ತಂದು
''ಏನವ್ವೆ ಸಂಪಗೆಯೆ ಶಿವನ ಸಿರಿಮುಡಿಗಿಂದು
ನೀನೀವ ಪೊಸಕುಸುಮಮಂ ನೀಡು ನೀಡೆಂದು'' ಕೇಳುತ್ತಾನೆ.

ಹೀಗೆ ಪ್ರತಿಯೊಂದು ಹೂವಿನ ಬಳಿ ಹೋದಾಗಲೂ ಅದನ್ನು ಬೇಡಿ ಬೇಡಿ ಪಡೆಯುತ್ತಾನೆ. ಒಂದು ವೇಳೆ ಆ ಹೂಗಿಡಗಳಿಗೆ ''ನಾನೇಕೆ ಈತನಿಗೆ ಹೂ ನೀಡಬೇಕು?!'' ಎಂಬ ಸಂಶಯ ಮೂಡಿದರೆ ಅದನ್ನು ನಿವಾರಿಸಲೆಂದು ''ಅಳಿಮನದ ಪರಿಯೆಂದು ಬಗೆಯದಿರ್'' ಎಂದು ಹೇಳಿ ತನ್ನ ಈ ಕೋರಿಕೆಯಲ್ಲಿ ಸ್ವಾರ್ಥವಾಗಲೀ, ನೀಚಭಾವವಾಗಲೀ ಇಲ್ಲವೆಂದೂ, ಆ ಹೂಗಿಡ ನೀಡಿದ ಹೂಗಳನ್ನು ಭಕ್ತಿಯಿಂದ ''ಆನಂದದಿಂದ ಶಿವಲಿಂಗಕರ್ಚಿಪೆನ್'' ಎಂದೂ ಹೇಳಿ ಅವುಗಳನ್ನು ಸಮಾಧಾನ ಪಡಿಸುತ್ತಾನೆ.

ಹೀಗೆ ಮುಂಬರುವ ಹಲವಾರು ಬಗೆಯ ಹೂಗಿಡಗಳ ಜೊತೆಗೆ ಸಂಭಾಷಿಸುತ್ತಾ, ತಾನು ಪುಣ್ಯಕಾರ್ಯಕ್ಕಾಗಿ ಹೂಗಳನ್ನು ಪಡೆಯುತ್ತಿರುವುದಾಗಿಯೂ, ಹಾಗೆ ಹೂಗಳನ್ನು ಆರಿಸುವಾಗ ಅದೆಲ್ಲಿ ಗಿಡಕ್ಕೆ ನೋವಾಗುತ್ತದೆಯೋ, ಬೇಸರವಾಗುತ್ತದೆಯೋ ಎಂದು ಭಾವಿಸಿ, ತಾವೇ ಹೂಗಳನ್ನು ನೀಡಿರೆಂದು ಬೇಡಿಪಡೆಯುತ್ತಾ ತನ್ನ ಇಡೀ ಉಪಾಸನೆಯಲ್ಲಿ ಎಲ್ಲಿಯೂ ನೋವಿಗಾಗಲೀ, ಅನುಮಾನಕ್ಕಾಗಲೀ ಎಡೆನೀಡದೆ ಕೇವಲ ಸಂಪೂರ್ಣ ಭಕ್ತಿ ರಸದಿಂದಲೇ ತುಂಬಿಸಿದ್ದಾನೆ. ಹಾಗೆ ಮುಂದುವರಿದು ಒಂದು ಕಡೆ ಅತಿಶಯವೋ, ನಾಟಕೀಯವೋ ಎನ್ನುವ ಹಾಗೆ ನೈದಿಲೆಯ ಹೂವನ್ನು ಉದ್ದೇಶಿಸಿ ''ನಾನು ನಿನ್ನನ್ನು ಶಿವನಿಗೆ ಅರ್ಪಿಸಿದರೆ ನೀನು ನನಗೆ ಏನು ಲಂಚವನ್ನು ನೀಡುತ್ತೀಯೇ?'' ಎಂದು ಕೇಳುತ್ತಾ ತಮಾಷೆಯನ್ನು ಮಾಡುತ್ತಾನೆ. ಈ ಭಾಗದಲ್ಲಿ ಶಿವನಿಗೆಂದೇ ಅರಳಿರುವ ಆ ನೈದಿಲೆಯನ್ನು (ನೈದಿಲೆಯೆಂಬ ಭಕ್ತ) ದೇವನಿಗೆ ಅರ್ಪಿಸಲು ತಾನು (ಪೂಜಾರಿಯ ಹಾಗೆ? ದಳ್ಳಾಳಿಯ ಹಾಗೆ?) ಮಧ್ಯಸ್ಥಿಕೆ ವಹಿಸಿಕೊಳ್ಳುವ ಸಣ್ಣ ಸುಳಿವನ್ನು ಕಾಣಬಹುದೋ ಎನಿಸುತ್ತದೆ. ಆದರೆ ಹರಿಹರನಂತಹ ಆದರ್ಶ ಭಕ್ತನ ಮನಸಿನಲ್ಲಿ ಖಂಡಿತವಾಗಿಯೂ ಅಂತಹ ಭಾವ ಸುಳಿದಿರಲಾರದು, ಅದೊಂದು ಕೆಣಕು ಮಾತು ಅಷ್ಟೇ ಎಂಬುದು ಇಲ್ಲಿ ಸ್ಪಷ್ಟವಾಗಿದೆ.

ಹೀಗೆ ಬಿಡಿಸಿದ ಅನೇಕ ಬಗೆಯ ಪರಿಮಳಭರಿತ ಹೂಗಳನ್ನು ಶುದ್ಧವಾದ ಬಾಳೆ, ಕಮಲ ಮುಂತಾದ ಎಲೆಗಳ ಮೇಲೆ ಸುರಿದು ತಾವರೆಯ ದಾರದಿಂದ ಪೋಣಿಸುತ್ತಾ-ಹೂಮಾಲೆ ಕಟ್ಟುತ್ತಾ ಕೈಯಿಂದ ಮುಟ್ಟಿ ಕಟ್ಟಿದರೆ ಅದರ ಮೀಸಲು ಅಳಿವುದೆಂಬ ಭಾವದಿಂದಲೋ, ಮನಮುಟ್ಟಿ ಕಟ್ಟುತ್ತಾನೆ.

ಅಷ್ಟೇ ಅಲ್ಲದೆ ಇಷ್ಟೊಂದು ನಿಃಸ್ವಾರ್ಥಭಕ್ತಿಯಿಂದ ಪೂಜೆಗಾಗಿ ಹೂಮಾಲೆ ಕಟ್ಟುತ್ತಿದ್ದರೂ ಸಹ ಅದೆಲ್ಲಿ ತನ್ನ ದೃಷ್ಟಿಯೇ ತಾಗಿ ಹೂಗಳು ಬಾಡಿಹೋಗುತ್ತವೆಯೋ ಎಂದು ಬಗೆದು ಕಣ್ಮುಚ್ಚಿಕೊಂಡು ಹೂಮಾಲೆ ಕಟ್ಟುತ್ತಾನೆ. ಆ ಕುರಿತಾಗಿ ಮನದಲ್ಲಿ ಭಾವಿಸಿದರೂ ಅದೆಲ್ಲಿ ಹೂಗಳು ಕಂದುವವೋ ಎಂದು ಭಾವಿಸಿ ಬೆಚ್ಚುತ್ತಾನೆ. ಹೀಗೆ ಅಲ್ಲಿನ ಮೊಗ್ಗುಗಳರಳುವ ಮುನ್ನ ಆತನ ಮನವೇ ಅರಳಿ; ಬಿರಿದ-ಬೀಗಿದ ಚಿತ್ತದಿಂದ, ಶಿವನನ್ನು

ಅರ್ಚಿಸುವ ಕಾತರದಿಂದ ಹೂಮಾಲೆ ಕಟ್ಟುತ್ತಿರಲು, ಅಷ್ಟರಲ್ಲಿ ಎಚ್ಚರಗೊಂಡ ದುಂಬಿಗಳು ಜೇನುಬೇಟೆಗಾಗಿ ಹೂದೋಟವನ್ನು ಹೊಕ್ಕಾಗ ಅಲ್ಲಿ ಹೂಗಳನ್ನು ಕಾಣದೆ ಕೋಪಗೊಂಡು ಪರಿಮಳದ ದಾರಿಯನ್ನು ಹಿಡಿದು ಹರಿಹರನಿದ್ದಲ್ಲಿಗೆ ಬಂದು, ಆತನ ಮೇಲೆ ಕೋಪತಾಳಿ ಹಲ್ಲುಮಸೆಯುವಂತೆ ಸದ್ದುಮಾಡುತ್ತವೆ. ಅದನ್ನರಿತ ಭಕ್ತನು, ತಾನು ದೇವರನ್ನು ಅರ್ಚಿಸುವ ಸದುದ್ದೇಶದಿಂದ ಹೂಗಳನ್ನು ಬಿಡಿಸಿಕೊಂಡಿರುವುದಾಗಿಯೂ ಹಾಗೆಯೇ ಆ ದುಂಬಿಗಳಿಗೂ ಸಹ ''ಅಳಿಯಾಸೆ ಬೇಡ'' ಎಂದು ಬೋಧಿಸುತ್ತಾ ''ಗಳಗಳನೆ ಬಂದಂತೆ ಮರಳಿ ತುಂಬಿಗಳೆಲ್ಲ'' ಎಂದು ಹೇಳಿ ಒಂದೆರಡು ಸಂಪಿಗೆ ಹೂಗಳನ್ನು ನೀಡಿ ಸಮಾಧಾನ ಹೇಳುತ್ತಾನೆ. ಆ ಭಕ್ತನ ಭಕ್ತಿಯ ಪ್ರಭೆ ಆ ದುಂಬಿಗಳನ್ನೂ ಆಗ ಪ್ರಭಾವಿಸಿದಂತೆ ಕಾಣುತ್ತದೆ. ಅವನು ಹಾಗೆ ಹೇಳಿದೊಡನೆ ಆ ದುಂಬಿಗಳು ಅವನ ಮಾತಿನಂತೆ ಕೇಳುತ್ತವೆ. ಎಂದರೆ ಭಕ್ತಿಯ ಆಚರಣೆ ಎಂತಹ ಪುಣ್ಯದ ಕೆಲಸ ! ಅದಕ್ಕೆ ಅಡ್ಡಿಯಾಗುವ ವಿಘ್ನಗಳು ಹಾಗೆಯೇ ಮರೆಯಾಗಿ ಹೋಗುತ್ತವೆ ಎಂಬುದು ಭಕ್ತ ಹರಿಹರನ ನಿಲುವಾಗಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಹೀಗೆ ಹೂಮಾಲೆಯನ್ನು ಪೂರ್ಣಗೊಳಿಸಿ ಶಿವಾಲಯಕ್ಕೆ ಬರುವ ಭಕ್ತನು ಏಕಾಏಕಿ ಅದನ್ನು ಶಿವನಿಗರ್ಪಿಸದೆ ಆ ಶಿವಲಿಂಗದಲ್ಲಿ ಸಾಕ್ಷಾತ್ ಶಿವನ ಇರುವಿಕೆಯನ್ನು ಕಾಣುವವನಾಗಿದ್ದಾನೆ. ಶಿವನು ಇನ್ನೂ ಮಲಗಿರುವನೋ ಅಥವಾ ತಾನು ತಡವಾಗಿ ಬಂದೆನೆಂದು ಹಾಗೆ ನಟಿಸುತ್ತಿರುವನೋ ಎಂದು ಭಾವಿಸಿ ಅವನನ್ನು ಎಚ್ಚರಿಸುವ ಸಲುವಾಗಿ, 'ತಾಜಾ ಹೂಗಳನ್ನು ನಿನಗಾಗಿ ತಂದಿದ್ದೇನೆ, ಏಳು ತಂದೆ' ಎಂದು ಎಚ್ಚರಿಸುತ್ತಾ, ಸೇವಂತಿಯ ಪನ್ನೀರಿನಿಂದ ದೇವನ ಮುಖವನ್ನು ತೊಳೆದು, ಹೊಸ ಪರಾಗದ ವಿಭೂತಿಯ ತಿಲಕವನ್ನಿಕ್ಕಿ ದೇವನ ಸೌಂದರ್ಯವನ್ನು ತನ್ನ ಮನದಲ್ಲೇ ಸವಿದು,(ಅವನಿಗೆ ಅದೆಲ್ಲಿ ತನ್ನ ದೃಷಿಯೇ ತಾಗುವುದೋ ಎಂದು ಭಾವಿಸಿ) ಮನಸ್ಸಿನಲ್ಲಿಯೇ ದೃಷ್ಟಿ ತೆಗೆದು, ಆತನ ಸಿರಿಮುಡಿಯನ್ನು ನೋವಾಗದಂತೆ ಬಿಚ್ಚಿ, ಅಲ್ಲಿರುವ ಶಶಿಕಳೆಗೆ ನೋವಾಗದಂತೆ, ಹೊಳೆವ ಸುರನದಿ ತುಳುಕದಂತೆ ಕೇತಕಿಯ ನುಣುಪಾದ ಎಸಳಿನಿಂದ ಕೆಂಜೆಡೆಗಳನ್ನು ಬಾಚುತ್ತಾ, ಮಲ್ಲಿಗೆಯ ಪರಿಮಳದ ಚಂದನವನ್ನಿಕ್ಕಿ, ಮೊಲ್ಲೆಯ ಮೊಗ್ಗುಗಳಿಂದ ನಾಗಕುಂಡಲವನ್ನಿಕ್ಕಿ, ಇರವಂತಿಯ ಕಂಠಮಾಲೆಯನ್ನಿಕ್ಕಿ, ದುಂಡುಮಲ್ಲಿಗೆಯ ಪದಕವನ್ನಿತ್ತು, ಸುರಹೊನ್ನೆಯ ಅರಳ್ಗಳಿಂದ ಉರಗಕಂಕಣವಿಕ್ಕಿ... ಹೀಗೆ ಶಿವನ ಒಂದೊಂದು ಲಿಂಗವನ್ನೂ ಸಿಂಗರಿಸುತ್ತಾ ಅದರಿಂದ ಉಂಟಾದ ಚೆಲುವನ್ನು ಕಂಡು ತಾನೇ ಹಿಗ್ಗುತ್ತಾ ಭಾವಪರವಶನಾಗಿ ಭಕ್ತಿಯ ಪರಾಕಾಷ್ಠೆಯನ್ನು ತಲುಪುತ್ತಾನೆ. ಇಂತಹ ಪರಾಕಾಷ್ಠೆಯನ್ನು ತಲುಪಿದ ಭಕ್ತನಿಗೆ ದೇವನ ಹೆಸರನ್ನೂ ಉಚ್ಚರಿಸಲಾಗದಷ್ಟು ಆನಂದವುಂಟಾಗುತ್ತದೆ. ಆಗ ಅವನು ''ವೀವಿವೀರೂರೂರು ಪಾಪಾಕ್ಷಕಾ'' ಎನ್ನುತ್ತಾ ಆತನ ನಾಮಸ್ಮರಣೆ ಮಾಡಲೂ ಗದ್ಗದಿಸುತ್ತಾನೆ.

ದೇವನ ಹೆಸರಿನ ಒಂದೊಂದು ಅಕ್ಷರವನ್ನು ಉಚ್ಚರಿಸುವಾಗಲೂ ಆತನಿಗೆ ಒಂದೊಂದು ವಿಧದ ಆನಂದವುಂಟಾಗುತ್ತದೆ. ಹಾಗೆ ಸ್ಮರಿಸುವಾಗ ಆತನ ಕಂಗಳಿಂದ ಧಾರಾಕಾರವಾಗಿ ಆನಂದಾಶ್ರು ಸುರಿಯಲಾರಂಭಿಸುತ್ತದೆ ಆ ವೇಳೆಗಾಗಲೇ ಆತ ಸಂಪೂರ್ಣ ಸಮರ್ಪಣಾಭಾವವನ್ನು ತಲುಪಿ,

''ಕಾವುದು ಮಹಾದೇವ
ಆರು ಉಂಟಲೆ ದೇವ
ಆರ ನಚ್ಚುವೆ ದೇವ
ಎನಗೆ ಹೊನ್ನುಂ ನೀನೆ
ಎನಗೆ ಚೆನ್ನುಂ ನೀನೆ
ಎನಗೆ ಛಲವುಂ ನೀನೆ
ಎನಗೆ ಬಲುಹುಂ ನೀನೆ ... ಮಾತೆಯು ನೀನೆ, ಪಿತನುಂ ನೀನೆ'' — ಎಂಬಿತ್ಯಾದಿಯಾಗಿ ಭಕ್ತಿಯ ಕಡಲಿನಲ್ಲಿ ಮುಳುಗಿ ಹೋಗುತ್ತಾನೆ.

''ನಾಂ ನಿನ್ನನೊಲಿದು ಹೊದ್ದಿದೆನಭವಾ'' ಎನ್ನುತ್ತಾ ತಾನು ದೇವನನ್ನು ಅರ್ಚಿಸುವ ಮೂಲಕ ಬದುಕಿನ ಸಾರ್ಥಕತೆಯನ್ನು ಹೊಂದಿದನೆಂದು ಹೇಳುತ್ತಾನೆ. ತನಗೆ ಯಾವಾಗಲೂ ವಿರೂಪಾಕ್ಷನ ಸೇವೆ ಮಾಡುವ ಭಾಗ್ಯ ಕರುಣಿಸಬೇಕೆಂದು ಬೇಡುತ್ತಾನೆ. ತಾನು ಸದಾ ಅವನ ನಾಮಸ್ಮರಣೆ ಮಾಡುವ, ರೂಪವನ್ನು ಹೊಗಳುವ, ಸದಾ ಭಕ್ತನಾಗಿಯೇ ಸೇವೆಗೈಯುವ ಅವಕಾಶಕ್ಕಾಗಿ ಬೇಡುತ್ತಾನೆ. ಏಕೆಂದರೆ ಆತನಿಗೆ ಇತರ ಐಹಿಕ, ಲೌಕಿಕ ಭೋಗಗಳಿಗಿಂತ ಸಿಗಬಹುದಾದ ಆನಂದಕ್ಕಿಂತ ಭಕ್ತಿಯಿಂದ ಸಿಗುವ ಆನಂದವೇ ಮಿಗಿಲಾಗಿರುತ್ತದೆ. ಆದ್ದರಿಂದಲೇ ಆತ

''ಭಕ್ತಿಸುಖದಿಂದಿತರ ಸುಖವದೆಲ್ಲಿಯದೆನಿಸಿ
ಮುಕ್ತಿಪದದಿಂದಧಿಕವಿದಕೆ ಪಡಿಯಿಲ್ಲೆನಿಸಿ
ಪರುಷಮಂ ಬಿಸುಡೆಂಬ ಸುರಭಿಯಂ ತೆಗೆಯೆಂಬ
ಸುರತರುವನೊಲ್ಲೆಂಬ ಅಮೃತಮಂ ಚೆಲ್ಲೆಂಬ
ನಿಧಿಗಳಂ ನೂಂಕು ಚಿಂತಾಮಣಿಯನಿಡು....

ಹೀಗೆ ಮೊದಲಾಗಿ ಹೇಳುತ್ತಾ ''ಪರಭಕ್ತಿಯ ಸುಖದ ಸೊಕ್ಕೇರಿ ಭಕ್ತಿ ಪರವಶತೆಯ ಫಲಿತಗಳನ್ನು ಸಾರುತ್ತಾನೆ.

ಹೀಗೆ ಹರಿಹರನ ಈ ಪುಷ್ಪರಗಳೆಯಲ್ಲಿ ಒಬ್ಬ ಆದರ್ಶ ಭಕ್ತನ ಚಿತ್ರಣ ಅಮೋಘವಾಗಿ ಮೂಡಿಬಂದಿದ್ದು , ಅದನ್ನು ಓದುವವರಿಗೆ ''ಆಹಾ... ಹರಿಹರನಂತೆ ನಾನೂ ಭಕ್ತನಾಗಬಾರದಿತ್ತೇ, ಅವನಂತೆ ನಾನೂ ದೇವನನ್ನು ಅರ್ಚಿಸಿ ಆನಂದ ಹೊಂದಬಾರದಿತ್ತೆ? ದೇವನೇ, ನನಗೂ ಅಂತಹ ಭಕ್ತಿಯನ್ನು ಕರುಣಿಸು.'' ಎಂದು ಬೇಡಿಕೊಳ್ಳಬೇಕೆನಿಸುವಂತಿದೆ. ಇಲ್ಲಿ ಭಕ್ತ ಹಾಗೂ ದೇವರ ನಡುವೆ ಯಾವುದೇ ಅಂತರವಿಲ್ಲ, ಪೂಜಾರಿಯೂ ಇಲ್ಲಿಲ್ಲ. ಇದೊಂದು ಸದಾ ಹಸಿರಾಗಿ ಆದರ್ಶವನ್ನು ಸಾರುವ ಭಕ್ತಿರಸಾಯನವಾಗಿದೆ ಎಂದರೆ ತಪ್ಪಾಗಲಾರದು. ,